# 1

# ಮೂಲಭೂತಗಳೊಂದಿಗೆ ಪ್ರಾರಂಭ

ಸಭೆಯ ನಾಯಕತ್ವದ ಬಗ್ಗೆ ನಾವು ಒಂದು ಅಧ್ಯಯನವನ್ನು ಪ್ರಾರಂಭಿಸುವದರಿಂದ, ನಾಯಕತ್ವದ "ಏನು" ಎಂಬವುಗಳನ್ನು ನಾವು ತಿಳಿಯುವ ಅಗತ್ಯತೆಯಿದೆ. ನಾಯಕತ್ವವು ಏನಾಗಿದೆ? ಯಾವುದು ನಾಯಕನನ್ನು ಮಾಡುತ್ತದೆ? ನಾಯಕತ್ವದ ಮೂಲವು ಯಾವುದು?

## ನಾಯಕತ್ವ ಎಂದರೇನು?

ನಾಯಕತ್ವವನ್ನು ನಿರೂಪಿಸುವುದು ಸುಲಭವಾದದ್ದಾಗಿರುವದಿಲ್ಲ. ನಾವು ದಾರಿಯಲ್ಲಿ ಶಬ್ದ ಮಾಡುವ ವಿಷ ಸರ್ಪವನ್ನು ಕಂಡರೆ, ಅದನ್ನು ತಿಳಿದಿದ್ದೇವೆಂದು ಯೋಚಿಸುವಂತೆ, ನಾವು ನಾಯಕತ್ವವನ್ನು ನೋಡುವಾಗ ಅದನ್ನು ತಿಳಿದು ಕೊಂಡಿದ್ದೇವೆಂದು ಯೋಚಿಸುತ್ತೇವೆ, ಆದರೆ ನಾಯಕತ್ವವನ್ನು ನಿರೂಪಿಸುವುದು ಶಬ್ದ ಮಾಡುವ ವಿಷ ಸರ್ಪವನ್ನು ನಿರೂಪಿಸುವದಕ್ಕಿಂತ ಹೆಚ್ಚು ಕಠಿಣವಾದದ್ದಾಗಿರುತ್ತದೆ.

ಯೇಸುವು ಒಬ್ಬ ನಾಯಕನಾಗಿದ್ದಾನೆಂಬುದನ್ನು ನಾವು ತಿಳಿದವರಾಗಿದ್ದೇವೆ; ಆತನಿಗೆ ಆತನನ್ನು ಹಿಂಬಾಲಿಸಿದ ಶಿಷ್ಯರಿದ್ದರು. ಮೋಶೆಯು ಒಬ್ಬ ನಾಯಕನಾಗಿದ್ದನು; ಅವನು ಇಸ್ರಾಯೇಲ್ಯರನ್ನು ಐಗುಪ್ತದಿಂದ ಅರಣ್ಯದ ಮುಖಾಂತರ ಕಾನಾನಿನ ಗಡಿಯವರೆಗೆ ನಡಿಸಿದನು. ನೆಹೆಮೀಯನು ಒಬ್ಬ ನಾಯಕನಾಗಿದ್ದನು; ಯೆರೂಸಲೇಮಿನ ಗೋಡೆಗಳನ್ನು ಪುನಃ ಕಟ್ಟುವದರಲ್ಲಿ ಅವನು ಇಸ್ರಾಯೇಲ್ಯರಿಗೆ ಮಾರ್ಗದರ್ಶನ ಮಾಡಿದನು. ಈ ಜನರ (ಯೇಸುವು ಮನುಷ್ಯನಿಗಿಂತಲೂ ಹೆಚ್ಚಾಗಿದ್ದನು) ವಿಶೇಷ ಗುಣಲಕ್ಷಣಗಳ ಒಟ್ಟು ನಾಯಕತ್ವದ ಒಂದು ನಿರೂಪಣೆಯಾಗಿರುತ್ತದೋ?

ದೊಡ್ಡ ನಾಯಕರ ಬಗ್ಗೆ ನಾವು ಯೋಚಿಸುವಾಗ, ಜಾರ್ಜ್ ವಾಶಿಂಗ್ಟನ್, ಅಬ್ರಹಾಮ್ ಲಿಂಕನ್, ಫ್ರಾಂಕ್ಲೀನ್ ರೂಜ್‌ವೇಲ್ಟ್ ಮತ್ತು ವಿನ್‌ಸ್ಟಾನ್ ಚರ್ಚಿಲ್‌ರಂಥ ಮಹಾ ಮುತ್ಸದ್ದಿಗಳ ಬಗ್ಗೆ ಯೋಚಿಸುತ್ತೇವೆ. ಹೀಗಿದ್ದರೂ, ನಾಯಕರು ಒಳ್ಳೆಯ ಇಲ್ಲವೇ ಕೆಟ್ಟ ಮಾರ್ಗಗಳಲ್ಲಿ ನಡಿಸಬಹುದು. ಹನ್ ದ ಅಟ್ಟಿಲನು ಒಬ್ಬ ನಾಯಕನಾಗಿದ್ದನು ಹಾಗೆಯೇ ಹಿಟ್ಲರ್‌ನಾಗಿದ್ದನು. ಯೇಸುವು ನಾಯಕನಾಗಿದ್ದನು, ಹಾಗೆಯೇ ಮಹಮ್ಮದನು ಆಗಿದ್ದನು, ಮತ್ತು ಹಾಗೆಯೇ ನಾಯಕರಾದ ಜಿಮ್ ಜೋನ್ಸ್ ಮತ್ತು ವೆರ್ನೊನ ಹೊವೆಲ್ಲ (ಡೇವಿಡ್ ಕೊರೆಶ್) ಆಗಿದ್ದರು.

ಒಬ್ಬ ನಿಶ್ಚಿತವಾದ ಪಂದ್ಯಾಟಗಾರನು ಒಬ್ಬ "ಗುಂಪಿನ ನಾಯಕನು" ಎಂದು ತಿಳಿಯಲ್ಪಡಬಹುದು. ಅವನು ಟೀಮಿನ ಕ್ಯಾಪ್ಟನ್‌ನಾಗಲೀ ಇಲ್ಲವೇ ಟೀಮಿನಲ್ಲಿ ಅತ್ಯುತ್ತಮ ಆಟಗಾರನಾಗಲೀ ಆಗಿರಲಿಕ್ಕಿಲ್ಲ; ಆದರೆ ಹೇಗೋ, ಅವನು ಆಟವಾಡುವದರಿಂದ, ಅವನ ಟೀಮಿನಲ್ಲಿಯ ಪ್ರತಿಯೊಬ್ಬನೂ ಚೆನ್ನಾಗಿ ಆಟ ಆಡುವನು ಮತ್ತು ಟೀಮ್ ಗೆಲ್ಲುತ್ತದೆ! ಇನ್ನೊಂದೆಡೆಯಲ್ಲಿ, ಕೆಲವು ಸಲ ಒಂದು ಟೀಮ್ ತೊಂದರೆಗೊಳಗಾಗುವಂತೆ ತೋರುತ್ತದೆ, ಯಾಕೆಂದರೆ, ನಮ್ಮ ತೀರ್ಮಾನದಲ್ಲಿ ಅದು "ನಾಯಕನಿಲ್ಲದ್ದು" ಆಗಿರುತ್ತದೆ.

ನಾಯಕನು ಏನಾಗಿರುವದಿಲ್ಲ ಎಂಬುದನ್ನು ನಾವು ತಿಳಿದಿರುತ್ತೇವೆ. ಒಬ್ಬನು ತೇಕುತ್ತ ಗ್ರಾಮದ ಅಂಗಡಿಗೆ ಬಂದು, ಅಂಗಡಿಯವನನ್ನು "ಒಂದು ತಾಸಿನ ಹಿಂದೆ ಮೂವತ್ತು ಜನರ ಒಂದು ಗುಂಪು ಇಲ್ಲಿಗೆ ಬಂದಿತೋ?" ಎಂದು ಕೇಳಿದವನ ಬಗ್ಗೆ ನಾವು ಕೇಳಿದ್ದೇವೆ. "ಹೌದು" ಎಂದು ಅಂಗಡಿಯವನು ಉತ್ತರ ಕೊಟ್ಟನು. "ಅವರು ಯಾವ ಮಾರ್ಗವಾಗಿ

ಹೋದರು? ನಾನು ಅವರೊಂದಿಗೆ ಕೂಡಿಕೊಳ್ಳಬೇಕು; ನಾನು ಅವರ ನಾಯಕನು" ಎಂದು ಆ ಮನುಷ್ಯನು ಮುಂದುವರಿಸಿ ಹೇಳಿದನು. ಆ ಮನುಷ್ಯನು ಒಬ್ಬ ನಾಯಕನಲ್ಲವೆಂದು ನಾವು ತಿಳಿದಿದ್ದೇವೆ, ಆದರೆ ಒಬ್ಬ ನಾಯಕನು ಏನಾಗಿದ್ದಾನೆ? ನಾಯಕತ್ವವು ಏನಾಗಿದೆ?

**ವಿವಿಧ ಗುಣಲಕ್ಷಣ ನಿರೂಪಣೆಗಳು**

ನಾಯಕತ್ವವು ವಿವಿಧ ರೀತಿಗಳಲ್ಲಿ ನಿರೂಪಿಸಲ್ಪಟ್ಟಿದೆ. ಡಿಕ್ಷನರಿಯು ಒಬ್ಬ ನಾಯಕನನ್ನು "ಒಂದು ಗುಂಪಿನ ಇಲ್ಲವೇ ಚಟುವಟಿಕೆಯ ಮಾರ್ಗದರ್ಶಕನಂತೆ, ಆಜ್ಞಾಪಿಸುವವನಂತೆ ಇಲ್ಲವೇ ಮುನ್ನಡಿಸುವ ಮುಖ್ಯಸ್ಥನಂತೆ" ಇರುವ ವ್ಯಕ್ತಿಯೆಂದು ನಿರೂಪಿಸುತ್ತದೆ. ಗುರಿಗಳನ್ನು ಏರ್ಪಡಿಸುವಲ್ಲಿ ಮತ್ತು ಸಾಧಿಸುವಲ್ಲಿ "ಒಂದು ಸಂಘಟಿತ ಗುಂಪಿನ ಚಟುವಟಿಕೆಗಳನ್ನು ಪ್ರಭಾವಗೊಳಿಸುವ ವಿಧಾನದಿಂದ" ಇತರರ ನಡತೆಯನ್ನು ನಿಯಂತ್ರಿಸುವ ಇಲ್ಲವೇ ನಡಿಸುವ ವಿಧಾನದವರೆಗೆ, ಇತರರನ್ನು ಪ್ರೇರೇಪಿಸುವದರ ಇಲ್ಲವೇ ಚುರುಕುಗೊಳಿಸುವವರೆಗೆ ನಾಯಕತ್ವದ ನಿರೂಪಣೆಗಳು ಇರುತ್ತವೆ.[1]

ಇತರ ನಿರೂಪಣೆಗಳ ಸಾಧ್ಯತೆಯೂ ಇರುತ್ತದೆ. ನಾಯಕತ್ವದ ಹಲವಾರು ಭಿನ್ನವಾದ ನಿರೂಪಣೆಗಳನ್ನು ಪುನರಾವಲೋಕನ ಮಾಡಿದನಂತರ, ಕೆನ್ನೆತ್ ಓ. ಗಂಗೆಲ್ ಅವರು ತಮ್ಮ ಕಂಡು ಕೊಳ್ಳುವಿಕೆಯನ್ನು ಹೀಗೆ ಸಂಕ್ಷೇಪಿಸಿ ಹೇಳಿದ್ದಾರೆ,

> ... ನಾಯಕತ್ವವು ಒಂದು *ಸಾಮರ್ಥ್ಯವಾಗಿದೆ,* ನಾಯಕತ್ವವು ಇತರ ಜನರೊಂದಿಗೆ ಕೆಲಸ ಮಾಡುವದನ್ನು ಒಳಗೊಂಡಿರುತ್ತದೆ; *ಒಂದು ರೀತಿಯ ಗುರಿಯ ಕಡೆಗೆ ಪ್ರಗತಿಯನ್ನು ನಾಯಕತ್ವವು ಒಳಗೊಂಡಿರುತ್ತದೆ.* ಈ ಮೂರು ವಿಷಯಗಳು ಈ ಪುಸ್ತಕದ ವ್ಯಾಪ್ತಿಗಾಗಿ ಸ್ವೀಕಾರ ಯೋಗ್ಯವಾದ ನಿರೂಪಣೆಗೆ ಯೋಗ್ಯವಾದರೆ, ಅದು ಒಂದು ರೀತಿಯಲ್ಲಿ ಈ ತರಹ ಕಾಣಬಹುದು: *ನಾಯಕತ್ವವು ಯಾವುದೇ ಕೊಡಲ್ಪಟ್ಟ ಸಮಯದಲ್ಲಿ, ಪರಸ್ಪರ ಸ್ವೀಕರಿಸಲ್ಪಟ್ಟ ಗುರಿಗಳ ದಿಕ್ಕಿನಲ್ಲಿ ಗುಂಪಿನ ನಡತೆಯನ್ನು ಅವನು ಬದಲಾಯಿಸುವದರಲ್ಲಿ ಪರಿಣಾಮಗೊಳ್ಳುವ, ಕೆಲವೊಂದು ಗುಣಲಕ್ಷಣಗಳ ಮತ್ತು ಸಾಮರ್ಥ್ಯದ ಗುಂಪಿನ ಒಬ್ಬ ಸದಸ್ಯನಿಂದ ಚಟುವಟಿಕೆಯಾಗಿದೆ.*[2]

ಬಹಳ ಸಲ, ನಾಯಕತ್ವದ ನಿರೂಪಣೆಗಳು ಒಂದು ರೀತಿಯ ನಾಯಕತ್ವದ ಬಗ್ಗೆ ಮುಂದಾಗಿ ತಿಳಿದು ಕೊಳ್ಳಲ್ಪಡುತ್ತವೆ. ಅದಕ್ಕೆ ವಿರುದ್ಧವಾಗಿ, ಎಲ್ಲಾ ರೀತಿಯ ನಾಯಕತ್ವವನ್ನು ಒಳಗೊಂಡಿರುವ ಮಾತನ್ನು ನಿರೂಪಿಸಲು ನಾವು ಬಯಸುತ್ತೇವೆ.

**ನಮ್ಮ ನಿರೂಪಣೆ**

ಹಾಗಾದರೆ, ಇಲ್ಲಿ, ನಾಯಕತ್ವದ ಬಗ್ಗೆ ನಮ್ಮ ನಿರೂಪಣೆಯಿರುತ್ತದೆ: *ವ್ಯಕ್ತಿಗಳ ಇಲ್ಲವೇ ಒಂದು ಗುಂಪಿನ ಉದ್ದೇಶ ಪೂರ್ವಕವಾದ ಮತ್ತು ಅರುಹುವುಳ್ಳ ಮಾರ್ಗದರ್ಶನ; ಅದು ಮೊದಲು ನಿರ್ಧರಿಸಿದ ಗುರಿಯ ಇಲ್ಲವೇ ಉದ್ದೇಶ ನೆರವೇರಿಸುವಿಕೆಯ ಕಡೆಗೆ ಇರುತ್ತದೆ.* ಈ ಪಾಠಗಳಲ್ಲಿ ಈ ರೀತಿಯ ನಾಯಕತ್ವವನ್ನು ನಾವು ಪರೀಕ್ಷಿಸಲಿದ್ದೇವೆ.

ಈ ನಿರೂಪಣೆಯ ಪ್ರತಿಯೊಂದು ಭಾಗವು ಮಹತ್ವದ್ದಾಗಿದೆ. ಮೊದಲನೆಯದು, ನಾಯಕತ್ವ, ಅದನ್ನು ನಾವು "ಉದ್ದೇಶ ಪೂರ್ವಕವಾದದ್ದು ಅರುಹುವುಳ್ಳದ್ದು" ಎಂದು ನಿರೂಪಿಸುತ್ತೇವೆ. ಅದರ ಅರ್ಥ "ಆಕಸ್ಮಿಕವಾದದ್ದಲ್ಲ" ಇಲ್ಲವೇ "ಅರುಹು ಇಲ್ಲದೇ ಇರುವಂಥದ್ದಲ್ಲ" ಕೆಲವು ಸಲ ನಾಯಕತ್ವವು ನಿರೂಪಿಸಲ್ಪಟ್ಟಂತೆ, ಅದರ ಅರ್ಥವು ಒಳ್ಳೇದಕ್ಕಾಗಲೀ ಇಲ್ಲವೇ ಕೆಟ್ಟದ್ದಕ್ಕಾಗಲೀ ಇತರರ ಮೇಲೆ ಪ್ರಭಾವ ಬೀರುವಂಥದ್ದಾಗಿದೆ. ಇದು ಸಂಭವಿಸುವದರಲ್ಲಿ ಸಂಶಯವಿರುವದಿಲ್ಲ. ನಾವು ನಮ್ಮ ಜೀವಿತಗಳಿಂದ, ನಮ್ಮ ನಡತೆಯಿಂದ, ನಮ್ಮ ಮಾತುಗಳಿಂದ, ಮತ್ತು ನಮ್ಮ ಮನೋಭಾವನೆಗಳಿಂದ ಇತರರ ಮೇಲೆ

ಪ್ರಭಾವಬೀರುತ್ತೇವೆ. ಹೀಗಿದ್ದರೂ, ಇದು ಈ ಪಾಠಗಳಲ್ಲಿ ನಾವು ಉಪಯೋಗಿಸುತ್ತಿರುವ "ನಾಯಕತ್ವದ" ಅರ್ಥವನ್ನು ಪೂರ್ತಿಗೊಳಿಸುತ್ತದೆ ಎಂದರ್ಥವಾಗುವದಿಲ್ಲ.

ಎರಡನೆಯದು, ನಾಯಕತ್ವವು "ವ್ಯಕ್ತಿಗಳ ಇಲ್ಲವೇ ಒಂದು ಗುಂಪಿನ ಮಾರ್ಗದರ್ಶನ" ಆಗಿರುತ್ತದೆ. ಒಬ್ಬ ನಾಯಕನು ಪ್ರತ್ಯೇಕವಾಗಿ ಅಸ್ತಿತ್ವದಲ್ಲಿ ಇರಲಾರನು. ನಿರೂಪಣೆಯಿಂದ, ನಾಯಕತ್ವವು ಇತರರ ಬಗ್ಗೆ ನಾಯಕನ ನಿರ್ದೇಶನವನ್ನು ಒಳಗೊಂಡಿರಬೇಕು. ಒಬ್ಬ ನಾಯಕನಿಗೆ ಹಿಂಬಾಲಕರು ಇರತಕ್ಕದ್ದು.

ಮೂರನೆಯದು, ನಾಯಕತ್ವವು "ಮೊದಲೇ ನಿರ್ಧರಿಸಿದ ಗುರಿಯನ್ನು ಇಲ್ಲವೇ ಉದ್ದೇಶವನ್ನು ಸಾಧಿಸುವದರ ಕಡೆಗೆ" ಒಂದು ಗುಂಪನ್ನು ನಡಿಸುವಂಥದ್ದಾಗಿದೆ. ನಾಯಕತ್ವವು ಏನಾಗಿರುವುದು ಎಂಬುದು ಇದಾಗಿದೆ: ಒಂದು ವಿಶಾಲವಾದ ಉದ್ದೇಶವು ಇಲ್ಲವೇ ಗುರಿಯು ಸಾಧಿಸಲ್ಪಡಲಿಕ್ಕಾಗುವಂತೆ ಇತರರು ವರ್ತಿಸುವಂತೆ ಮಾಡುವುದಾಗಿದೆ. ಆ ಗುರಿಯು ನಾಯಕನ ಮನಸ್ಸಿನಲ್ಲಿರುವುದು, ಆದರೆ ಅವನು ನಡಿಸುವವರ (ವಿಶೇಷವಾಗಿ ಮೊದಲು) ಮನಸ್ಸುಗಳಲ್ಲಿ ಇರಬೇಕಾದ ಅವಶ್ಯಕತೆಯಿಲ್ಲ.

ಎಲ್ಲಾ ರೀತಿಯ ನಾಯಕತ್ವವನ್ನು ಒಳಗೊಂಡಿರಲಿಕ್ಕೆ ಸಾಕಾಗುವಷ್ಟು ಈ ನಿರೂಪಣೆಯು ವಿಶಾಲವಾದದ್ದಾಗಿದೆ. ಯಜಮಾನನು ಒಂದು ಗುರಿಯನ್ನು ಸಾಧಿಸುವದರ ಕಡೆಗೆ ತನ್ನ ಕೆಲಸದವರನ್ನು ನಡಿಸುತ್ತಾನೆ, ಆ ಗುರಿಯು ಅವನಿಗೆ ಹೆಚ್ಚು ಹಣವನ್ನು ಗಳಿಸುವಂಥದ್ದು ಆಗಿರಬಹುದು. ಅವನು ಅದನ್ನು ಅವರು ಕೆಲಸ ಮಾಡುವಾಗ ಅವರ ಸಂಬಳವನ್ನು ಕೊಡುವದರಿಂದ ಮತ್ತು ಅವರು ಕೆಲಸ ಮಾಡದೇ ಇರುವಾಗ ಅವರನ್ನು ಕೆಲಸದಿಂದ ತೆಗೆದು ಹಾಕುವಂತೆ ಮಾಡುತ್ತಾನೆ, ಈ ನಿರೂಪಣೆಯಿಂದ ಅದು ನಾಯಕತ್ವದಲ್ಲಿ ಒಳಗೊಳ್ಳುತ್ತದೆ. ಒಬ್ಬ ಬ್ಯಾಂಕ್ ದರೋಡೆ ಖೋರನು ಅದರಲ್ಲಿಯ ಹಣವನ್ನು ಕದಿಯಲಿಕ್ಕಾಗಿ ನೆಲಮಾಳಿಗೆಯ ಬಾಗಿಲನ್ನು ತೆರೆಯಲು ಗನ್ ಪಾಯಿಂಟಿನಿಂದ ನಿರ್ದೇಶಿಸುತ್ತಾನೆ. ಅದೂ ಸಹ, ಒಂದು ರೀತಿಯ ನಾಯಕತ್ವವಾಗಿದೆ.

ಸಭೆಯಲ್ಲಿ, ನಾಯಕರಿಗೆ ಯಜಮಾನನೊಂದಿಗೆ ಮತ್ತು ಬ್ಯಾಂಕ್ ದರೋಡೆ ಖೋರನೊಂದಿಗೆ ಒಂದು ರೀತಿಯಲ್ಲಿ ಸಾಮಾನ್ಯವಾದದ್ದು ಇರುತ್ತದೆ. ಅವರೂ, ಸಹ ಏನಾದರೊಂದನ್ನು ಮಾಡಲಿಕ್ಕೆ ಜನರನ್ನು ನಡಿಸಲು, ಮಾರ್ಗದರ್ಶನ ಮಾಡಲು ಇಲ್ಲವೇ ನಿರ್ದೇಶಿಸಲು ಪ್ರಯತ್ನಿಸುತ್ತಾರೆ. ಸಭೆಯ ನಾಯಕರ ಮತ್ತು ಇತರರ ಮಧ್ಯದಲ್ಲಿ ಭಿನ್ನತೆಯು "ನಾಯಕತ್ವ" ಎಂಬ ಪದದ ಅರ್ಥದಲ್ಲಿ ಇರುವದಿಲ್ಲ, ಆದರೆ *ಹುಡುಕಲ್ಪಟ್ಟ ಗುರಿಗಳಲ್ಲಿ ಮತ್ತು ನಡಿಸುವದರಲ್ಲಿ ಉಪಯೋಗಿಸಿದ ವಿಧಾನಗಳಲ್ಲಿ ಇರುತ್ತದೆ.*

## ನಾಯಕತ್ವದ ಮೂಲವು ಯಾವುದು?

ಒಬ್ಬನು ನಾಯಕನಾಗುವುದು ಹೇಗೆ? ಅದಕ್ಕೆ ನಾವು ಉತ್ತರ ಕೊಡುವ ಮೊದಲು, ಸಂಬಂಧಿಸಿದ ಎರಡು ಪ್ರಶ್ನೆಗಳನ್ನು ವಿಚಾರಿಸಲು ಬಯಸುವೆವು.

### ಎರಡು ಪ್ರಶ್ನೆಗಳು

*ಪ್ರತಿಯೊಬ್ಬನೂ ನಾಯಕನಾಗಿರುವನೋ?* ಪ್ರತಿಯೊಬ್ಬನೂ ನಾಯಕನಾಗಿರುವನು ಎಂದು ಕೆಲವರು ಹೇಳುತ್ತಾರೆ. (ನಾಯಕತ್ವದ ಒಬ್ಬನ ನಿರೂಪಣೆಯನ್ನು ಅವಲಂಭಿಸಿ) ಮಿತಿಯುಳ್ಳ ಅರ್ಥದಲ್ಲಿ ಅದು ಸತ್ಯವಾಗಿರುವದರಲ್ಲಿ ಸಂಶಯವಿಲ್ಲ. ಪ್ರತಿಯೊಬ್ಬನೂ ಕೆಲವೊಂದು ಪ್ರಭಾವವನ್ನು ಬೀರಿ ಇತರರನ್ನು ಕೆಲವೊಂದು ದಿಕ್ಕುಗಳಿಗೆ ನಡಿಸುತ್ತಾನೆ. ಬಹಳ ಸಲ ಈ ರೀತಿಯ ನಾಯಕತ್ವವು ಅರುಹು ಇಲ್ಲದ್ದಾಗಿರುತ್ತದೆ; ಜನರು ತಾವು ನಡಿಸುತ್ತಿದ್ದೇವೆ ಇಲ್ಲವೇ ನಡಿಸಲ್ಪಡುತ್ತಿದ್ದೇವೆ ಎಂಬುದನ್ನು ತಿಳಿದು ಕೊಂಡಿರುವದಿಲ್ಲ. ಕ್ರೈಸ್ತರು ತಮ್ಮ ಪ್ರಭಾವದ ಬಗ್ಗೆ

ತಿಳಿದವರಾಗಿ ಇತರರನ್ನು ಪರಲೋಕದ ಕಡೆಗೆ ನಡಿಸಲು ತಮ್ಮ ಪ್ರಭಾವವನ್ನು ಉಪಯೋಗಿಸಲು ಹುಡುಕಬೇಕು.

ಪ್ರತಿಯೊಂದು ಸಂದರ್ಭದಲ್ಲಿ ಪ್ರತಿಯೊಬ್ಬನೂ ನಾಯಕನಾಗಿರುವದಿಲ್ಲ, ಅದು ಹಾಗಿದ್ದರೆ, "ನಾಯಕ" ಮತ್ತು "ನಾಯಕತ್ವ" ಎಂಬ ಪದಗಳಿಗೆ ಅರ್ಥವಿರುವದಿಲ್ಲ.

*ನಾಯಕರು ಹುಟ್ಟಿರುವರೋ ಇಲ್ಲವೇ ಮಾಡಲ್ಪಟ್ಟಿರುವರೋ?* ಒಂದು ಅರ್ಥದಲ್ಲಿ ನಾಯಕರು "ಹುಟ್ಟಿದವರಾಗಿರುವರು" ಕನಿಷ್ಠ ಪಕ್ಷ ಅವರ ಜನನ ಮತ್ತು ಮೊದಲಿನ ಅನುಭವಗಳು ನಾಯಕತ್ವಕ್ಕಾಗಿ ಅವರನ್ನು ಅರ್ಹರನ್ನಾಗಿ ಮಾಡುವವು. "ಖಾಲಿಸ್ಮಾಟಿಕ್" ನಾಯಕರೆಂದು ನಾವು ಕರೆಯುವವರನ್ನು ಎಲ್ಲಾ ಜನರು ನೋಡಿರುವರು; ಜನರು ಮನಃಪೂರ್ವಕವಾಗಿ ಅವರನ್ನು ಹಿಂಬಾಲಿಸುವರು. ಅವರು ಹೆಚ್ಚಾದ ಪ್ರಯತ್ನ ಮಾಡದೇ ತಮ್ಮ ಸುತ್ತಲೂ ಮೆಚ್ಚಿಕೊಳ್ಳುವ ಇಲ್ಲವೇ ಹಿಂಬಾಲಿಸುವವರ ಗುಂಪುಗಳನ್ನು ಕೂಡಿಸಿಕೊಳ್ಳುವರು. ಹುದ್ದೆಗಳಿಗೆ ಅವರು ಆಯ್ಕೆ ಮಾಡಲ್ಪಟ್ಟವರಾಗಿರಲಿ ಇಲ್ಲವೇ ಕಂಪನಿಗಳ ಮುಖ್ಯಸ್ಥರಾಗಿ ಮೇಲ ಕ್ಕೇಳಲಿ, ಇತರರು ಸಲಹೆಗಾಗಿಯೂ ಮಾರ್ಗದರ್ಶನಕ್ಕಾಗಿಯೂ ತಮ್ಮ ಕಡೆಗೆ ತಿರುಗುವದನ್ನು ಕಂಡು ಕೊಳ್ಳುವರು. ಇವಲ್ಲದೇ ತಮ್ಮ ಮನಸ್ಸಿಗೆ ಬಂದಂತೆ ಮಾಡಲು ಇಲ್ಲವೇ ಕೆಲವೊಂದು ಕಾರ್ಯವನ್ನು ಸಾಧಿಸುವದಕ್ಕಾಗಿ ಸಾಧ್ಯವಾದ ಪರಿಣಾಮಕಾರಿಯಾದ ಮಾರ್ಗದಲ್ಲಿ ಕೆಲಸದವರನ್ನು ಮತ್ತು ಸಲಕರಣೆಗಳನ್ನು ಒಂದು ಗೂಡಿಸಲು ಇಲ್ಲವೇ ಸಂಘಟಿಸಲು ನಾಯಕತ್ವದ ಸಾಮರ್ಥ್ಯದೊಂದಿಗೆ ಜನಿಸಿದಂತೆ ತೋರುವರು.

"ಆ ಜನ್ಮ ನಾಯಕನ" ಅತ್ಯುತ್ತಮ ಉದಾಹರಣೆಯು ಹೊಸ ಒಡಂಬಡಿಕೆಯಲ್ಲಿ ಸೌಲನು, ಅವನು ಅಪೊಸ್ತಲ ಪೌಲನಾದನು. ಯೆಹೂದ್ಯರಲ್ಲಿ ಒಬ್ಬ ನಾಯಕನು (ಫಿಲಿಪ್ಪಿ 3:4-7), ದೇವರ ಕೃಪೆಯಿಂದ, ಅವನು ಮಾರ್ಪಾಟುಹೊಂದಿದಾಗ, ಕ್ರೈಸ್ತ ಧರ್ಮದಲ್ಲಿ ನಾಯಕನಾದನು ಯಾವುದೇ ಸಂಘಟನೆಯಲ್ಲಿ ಇಲ್ಲವೇ ಗುಂಪಿನಲ್ಲಿ ಪೌಲನು ಒಬ್ಬ ನಾಯಕನಾಗಿದ್ದಿರಬಹುದು.

ಇನ್ನೊಂದೆಡೆಯಲ್ಲಿ, ಕಾರ್ಯಕ್ಕೆ ಸನ್ನದ್ಧರಾಗಿದ್ದಂತೆ ಕಂಡು ಬರುವ ಜನರು ಕೆಲವು ಸಲ ಪರಿಸ್ಥಿತಿಗಳಿಂದ ನಾಯಕತ್ವದ ಸ್ಥಾನಗಳಿಗೆ ಒತ್ತಾಯದಿಂದ ನೇಮಿಸಲ್ಪಡುತ್ತಾರೆ. ಹುಟ್ಟು ನಾಯಕರಲ್ಲದವರು ಇಲ್ಲವೇ ನಾಯಕತ್ವಕ್ಕಾಗಿ ತರಬೇತಿ ಹೊಂದದೇ ಇರುವವರು ಹೇಗೂ ನಡಿಸುವದಕ್ಕೆ ಒತ್ತಾಯಿಸಲ್ಪಟ್ಟಿರುವದನ್ನು ನಾನು ನೋಡಿದ್ದೇನೆ. (ಅಂಥ ಸಭಾ ನಾಯಕರ ಬಗ್ಗೆ ಬಹಳ ಟೀಕೆ ಮಾಡುತ್ತೇವೆ.)

ಕೆಲವರು ನಾಯಕರಾಗುವಾಗ, ಅವರು ಇತರರಿಗಿಂತ ಚೆನ್ನಾಗಿ ಸನ್ನದ್ಧರಾಗಿದ್ದರೂ ನಡಿಸುವ ಕೆಲಸವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಯಾರಾದರೂ ಕಲಿಯ ಬಹುದು. ಈ ಅರ್ಥದಲ್ಲಿ, ನಾಯಕರು "ಮಾಡಲ್ಪಡಬಹುದು."

**ನಾಯಕತ್ವವು ದೇವರಿಂದ ಒಂದು ವರದಂತೆ**

ನಾಯಕತ್ವದ ನಿಜವಾದ ಮೂಲವು ದೇವರಾಗಿದ್ದಾನೆ! ನಾಯಕತ್ವವು ದೇವರಿಂದ ಒಂದು ವರವಾಗಿದೆಯೆಂದು ಹೊಸ ಒಡಂಬಡಿಕೆಯು ಬೋಧಿಸುವದಕ್ಕೆ ಆಶ್ಚರ್ಯಪಡಬಾರದು. ಬೈಬಲಿನ ಸಮಯಗಳಲ್ಲಿ, ದೇವರು ತನ್ನ ಜನರಿಗಾಗಿ ನಾಯಕರನ್ನು ಕರೆದನು ಮತ್ತು ಪ್ರತಿಷ್ಠಿಸಿದನು. ಆತನು ಆ ನಾಯಕರನ್ನು ಸಮರ್ಥರನ್ನಾಗಿಯೂ ಮಾಡಿದನು. ಆತನು ಕೆಲವು ವಾಗ್ದಾನ ಮಾಡದ ವಸ್ತುಗಳನ್ನು ಉಪಯೋಗಿಸಿದನು. ಮೋಶೆಯು ಆಗಲೇ ನಾಯಕತ್ವದಲ್ಲಿ ತನ್ನ ಹಸ್ತವನ್ನು ಪ್ರಯತ್ನಿಸಿ ಸೋತು ಹೋಗಿದ್ದನು; ಗಿದ್ಯೋನನು ನ್ಯಾಯಾಧೀಶನನ್ನು ದೃಢಪಡಿಸಲು ಕಠಿಣನಾಗಿದ್ದನು; ಎಂಟು ಜನ ಬಾಲಕರಲ್ಲಿ ದಾವೀದನು ಕುಟುಂಬದಲ್ಲಿ ಚಿಕ್ಕವನಾಗಿದ್ದನು, ಎಲ್ಲರೂ ಅವನಿಗಿಂತ ಹೆಚ್ಚು ಪ್ರಭಾವವುಳ್ಳವರಾಗಿದ್ದರು; ಅಪೊಸ್ತಲರು ಸಾಮಾನ್ಯವಾಗಿ ನಾಯಕತ್ವಕ್ಕೆ ತಮ್ಮ ಕರೆಯನ್ನು ನಂಬಲು ಕಠಿಣವಾಗಿ ಕಂಡು ಕೊಂಡ

ಗಲಿಲಾಯದವರನ್ನು ದ್ವೇಷಿಸಿದರು. ಇವರೆಲ್ಲರೂ ದೊಡ್ಡ ನಾಯಕರಾದರು, ಯಾಕಂದರೆ ನಡಿಸಲಿಕ್ಕೆ ದೇವರು ಅವರನ್ನು ಶಕ್ತರನ್ನಾಗಿ ಮಾಡಿದನು. ಆತನು ಇದನ್ನು ಅದ್ಭುತಕರವಾಗಿ ಮಾಡದಿದ್ದರು, ದೇವರು ಇಂದು ಸಭೆಯಲ್ಲಿ ಇನ್ನೂ ನಾಯಕರನ್ನು ಮಾಡುತ್ತಿರುವನು.

ಮೂರು ವಾಕ್ಯಭಾಗಗಳು ಹೊಸ ಒಡಂಬಡಿಕೆಯ ಸಮಯಗಳಲ್ಲಿ, ನಾಯಕತ್ವವನ್ನು ಒಂದು ವರದಂತೆ ಮಾತಾಡುತ್ತವೆ. ಮೊದಲನೆಯದು, "ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ, ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು *ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು.* ... ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು" (ಎಫೆಸ 4:11, 12; RSV; ಒತ್ತಿ ಹೇಳಿದ್ದು ನನ್ನದು) ಎಂದು ನಾವು ಓದುತ್ತೇವೆ. ಎರಡನೆಯದು, ರೋಮಾಪುರ 12:6-8ರಲ್ಲಿ "ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ. ಅದು ಸಭಾ ಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ. ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿ ಹೇಳುವವನು ಬುದ್ಧಿ ಹೇಳುವದರಲ್ಲಿಯೂ ನಿರತನಾಗಿರಲಿ. ದಾನ ಕೊಡುವವನು ಯಥಾರ್ಥಮನಸ್ಸಿನಿಂದ ಕೊಡಲಿ. ಹಿರಿತನ ನಡಿಸುವವನು ಆಸಕ್ತಿಯಿಂದ ನಡಿಸಲಿ ..." ಎಂದು ನಾವು ಓದುತ್ತೇವೆ (NRSV). (ಒತ್ತಿ ಹೇಳಿದ್ದು ನನ್ನದು.) KJVಯಲ್ಲಿ "ಆಡಳಿತ ಮಾಡುವವನು ಆಸಕ್ತಿಯಿಂದ ಮಾಡಲಿ" ಎಂದಿದೆ. *The New Testament From 26 Translations* ದಲ್ಲಿ[3] ಕೊಡಲ್ಪಟ್ಟ ಭಾಷಾಂತರಗಳಲ್ಲಿ ಇವು ಇದೆ: "ಆಳುವವನು ..." (Con); "ಅಧಿಕಾರದಲ್ಲಿರುವವನು" (TCNT); "ಅಧ್ಯಕ್ಷತೆವಹಿಸುವವನು ..." (Wey); "... ನೀನು ನಾಯಕನಾಗಿದ್ದರೆ ..." (NEB). NIVಯಲ್ಲಿ "... ಅದು ನಾಯಕತ್ವವಾಗಿದ್ದರೆ ..." ಎಂದಿದೆ. ಮೂರನೆಯದು, 1 ಕೊರಿಂಥ 12:28ರಲ್ಲಿ ಪೌಲನು ಹೀಗೆ ಬರೆದಿದ್ದಾನೆ. "ದೇವರು ತನ್ನ ಸಭೆಯಲ್ಲಿ ಮೊದಲನೇದಾಗಿ ಅಪೊಸ್ತಲರನ್ನು, ಎರಡನೇದಾಗಿ ಪ್ರವಾದಿಗಳನ್ನು, ಮೂರನೇದಾಗಿ ಉಪದೇಶಕರನ್ನು ಇಟ್ಟಿದ್ದಾನೆ. ಆ ಮೇಲೆ ಮಹಾತ್ಕಾರ್ಯ ಮಾಡುವ ಶಕ್ತಿಯನ್ನೂ ನಾನಾ ರೋಗಗಳನ್ನು ವಾಸಿಮಾಡುವವರನ್ನೂ, ಪರಸಹಾಯಕರನ್ನೂ, *ಆಡಳಿತೆ ಮಾಡುವವರನ್ನೂ* ..." (RSV). (ಒತ್ತಿ ಹೇಳಿದ್ದು ನನ್ನದು.) *The New Testament From 26 Translations* ಪ್ರಕಾರ, "ಆಡಳಿತೆಗಾರರು" ಎಂಬುದರ ಬದಲು ಇತರ ಆವೃತ್ತಿಗಳು "ಸರಕಾರಗಳು" (KJV), "ಸಂಘಟನಾಕಾರರು" (Phi), "ಅವರನ್ನು ನಡಿಸಲು ಬಲವನ್ನು" (NEB), "ಬುದ್ಧಿವಂತ ಮಾರ್ಗದರ್ಶಕರು" (Bas), "ಇತರರನ್ನು ಒಂದಾಗಿ ಕೆಲಸ ಮಾಡುವಂತೆ ಮಾಡಬಲ್ಲವರು" (Tay), ಇಲ್ಲವೇ "ಮೇಲ್ವಿಚಾರಕರು" (Beck) ಎಂಬವುಗಳನ್ನು ಉಪಯೋಗಿಸುತ್ತದೆ. NIVಯಲ್ಲಿ "ಆಡಳಿಕೆಯ ವರಗಳು" ಎಂದಿದೆ ಹಾಗೂ (NRSV)ಯು "ನಾಯಕತ್ವದ ವಿಧಾನಗಳು" ಎಂದು ಹೇಳುತ್ತದೆ.

*ನಾಯಕತ್ವವು ಇಂದು ಹೇಗೆ ಒಂದು ವರದಂತೆ ಯೋಚಿಸಲ್ಪಡಬಹುದು?* ಬಹುಶಃ ನಾಯಕರು, ಹೆಚ್ಚಾದ ಇತರರಿಗಿಂತ ಹೆಚ್ಚಾಗಿ ತಮ್ಮನ್ನು "ಸ್ವಂತ ಮಾಡಲ್ಪಟ್ಟ ಜನರಂತೆ" ಯೋಚಿಸಬಹುದಾಗಿದೆ. "ನಾನು ಕೆಲಸ ಮಾಡಿದ್ದೇನೆ. ನಾನು ಶಾಲೆಗೆ ಹೋಗಿದ್ದೇನೆ. ನಾನು ಬಹಳ ಸಮಯ ಜೀವಿಸಿದ್ದೇನೆ ಮತ್ತು ಅನೇಕ ದೊಡ್ಡ ಒಳ್ಳೆಯ ಸಂಗತಿಗಳನ್ನು ಮಾಡಿದ್ದೇನೆ. ನಾನು ಗೌರವಿಸಲ್ಪಡಲು ಪಾತ್ರನಾಗಿದ್ದೇನೆ, ನನ್ನನ್ನು ಜನರು ಹಿಂಬಾಲಿಸಬೇಕು." ಇತರರ ಮೇಲಿನ ನನ್ನ ನಾಯಕತ್ವವು ಒಂದು ವರವಾಗಿದೆ ಎಂದು ಯಾರಾದರೂ ಹೇಗೆ ಹೇಳಬಹುದು? ಎಂದು ಅವರು ಹೇಳಬಹುದು. ಹಲವಾರು ವಿಚಾರಿಸುವಿಕೆಗಳು ನಾಯಕತ್ವವು ಒಂದು ವರವಾಗಿದೆ ಇಲ್ಲವೇ ದೇವರು ಕೊಟ್ಟ ತಲಾಂತು ಆಗಿದೆ ಎಂಬುದನ್ನು ನೋಡಲು

ನಮಗೆ ಸಹಾಯ ಮಾಡುತ್ತವೆ.

ಒಂದು ಕಡೆಯಲ್ಲಿ, ನಾಯಕರು ಮಾಡಲ್ಪಡುವದಕ್ಕಿಂತ ಹುಟ್ಟಿದವರಾಗಿದ್ದರೆ (ಇಲ್ಲವೇ ಮಾಡಲ್ಪಟ್ಟಿದ್ದರಿಂದ *ಹೆಚ್ಚಾಗಿ* ಹುಟ್ಟಿದವರಾಗಿದ್ದರೆ), ಆಗ ಸಭೆಯ ನಾಯಕರು ಪ್ರತಿಯೊಂದು ಒಳ್ಳೆಯ ಹಾಗೂ ಪರಿಪೂರ್ಣವಾದ ವರವು ದೇವರಿಂದ ಬರುತ್ತದೆ ಎಂಬುದನ್ನು ಜ್ಞಾಪಿಸಿಕೊಳ್ಳಬೇಕು (ಯಾಕೋಬ 1:17). ಅವರು ತಮ್ಮ ತಂದೆ ತಾಯಿಗಳನ್ನು ಆಯ್ದುಕೊಳ್ಳಲಿಲ್ಲ, ಇಲ್ಲವೇ ಅವರು ತಮ್ಮ ಸ್ವಾಭಾವಿಕವಾದ ವರಗಳಿಗೆ ಅವರು ಜವಾಬ್ದಾರರಲ್ಲ. ಒಬ್ಬನು ಎತ್ತರವಾಗಿದ್ದರೆ, ಬಲ ಶಾಲಿಯಾಗಿದ್ದರೆ, ಒಳ್ಳೇ - ನೋಟವುಳ್ಳವನಾಗಿದ್ದರೆ, ಬುದ್ಧಿ ವಂತನಾಗಿದ್ದರೆ, ಮತ್ತು "ನೈಸರ್ಗಿಕವಾಗಿ ಹುಟ್ಟಿದ ನಾಯಕನಾಗಿದ್ದರೆ," ಅವನಿಗೆ ಕೊಚ್ಚಿ ಕೊಳ್ಳಲಿಕ್ಕೆ ಯಾವುದೂ ಇರುವದಿಲ್ಲ. ಮಾನವ ದೃಷ್ಟಿಕೋನದಿಂದ ಅವನಿಗೆ ಸರಿಯಾದ ತಂದೆ ತಾಯಿಗಳು ದೊರೆತರು. ದೇವರ ದೃಷ್ಟಿಕೋ ನದಿಂದ, ಅವನು ಅಂಥ ವರಗಳಿಂದ ಜನಿಸುವಂತೆ ದೇವರು ಬಿಟ್ಟನೆಂಬುದನ್ನು ಅವನು ಅರ್ಥಮಾಡಿಕೊಳ್ಳುವ ಅಗತ್ಯತೆಯಿರುತ್ತದೆ; ದೇವರಿಗೆ ಮಹಿಮೆಯಾಗಲಿ! ನೈಸರ್ಗಿಕವಾಗಿ ನಾಯಕನಾಗಿದ್ದ ಪೌಲನು ತನ್ನ ವರಗಳು ದೇವರಿಂದ ಬಂದವುಗಳೆಂದು ಒಪ್ಪಿಕೊಂಡಿದ್ದನು. "ಆದರೆ ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ" (1 ಕೊರಿಂಥ 15:10) ಎಂದು ಅವನು ಹೇಳಿ ದನು.

ಇನ್ನೊಂದು ಕಡೆಯಲ್ಲಿ, ನಾಯಕರು ಹುಟ್ಟುವದಕ್ಕಿಂತ ಮಾಡಲ್ಪಟ್ಟವರಾಗಿದ್ದರೆ, ಆಗ ನಾವು ಇನ್ನೂ ಜೀವನದಲ್ಲಿಯ ಎಲ್ಲಾ ಒಳ್ಳೆಯದು ದೇವರಿಂದ ಬರುತ್ತದೆ ಎಂದು ಜ್ಞಾಪಿಸಿ ಕೊಳ್ಳುವ ಅಗತ್ಯತೆಯಿರುತ್ತದೆ. *ಜನರು ನಾಯಕರಾಗುವಂತೆ ಮತ್ತು ನಾಯಕತ್ವದಲ್ಲಿ ಯಶಸ್ಸು ಹೊಂದುವಂತೆ ಶಕ್ತರನ್ನಾಗಿ ಮಾಡುವ ಸಂದರ್ಭಗಳು ಅಂತಿಮವಾಗಿ ದೇವರ ಕಡೆಗೆ ಹಿಂದಿರುಗಿ ಗುರಿತಿಸಲ್ಪಡುವವು.* "ನಾನು ಕಷ್ಟಪಟ್ಟು ಕೆಲಸಮಾಡಿದೆನು ಮತ್ತು ಕಠಿಣವಾಗಿ ಅಭ್ಯಾಸ ಮಾಡಿದೆನು" ಎಂದು ಒಬ್ಬನು ಹೇಳಬಹುದು, - ಆದರೆ ಕೆಲಸ ಮಾಡಲು ಹಾಗೂ ಅಭ್ಯಾಸ ಮಾಡಲು ಅವನು ಎಲ್ಲಿಂದ ಅಪೇಕ್ಷೆ ಹೊಂದಿದನು? ತಂದೆ ತಾಯಿಗಳಿಂದ ಇಲ್ಲವೇ ಅಜ್ಜ ಅಜ್ಜಿಯರಿಂದ? ಒಬ್ಬ ಸ್ನೇಹಿತನಿಂದ ಇಲ್ಲವೇ ಒಬ್ಬ ನೆರೆಯವನಿಂದ? ಒಬ್ಬ ಶಿಕ್ಷಕನಿಂದ? "ತನ್ನಷ್ಟಕ್ಕೆ ತಾನೇ" ಯಶಸ್ಸು ಹೊಂದುವ ಪ್ರತಿಯೊಬ್ಬನು ಬಹುಶಃ ತಾನು ತನ್ನ ಅತ್ಯುತ್ತಮ ವಾದದ್ದನ್ನು ಮಾಡಲು ಪ್ರೋತ್ಸಾಹಿಸಿದ್ದರಲ್ಲಿ ಪ್ರಮುಖ ಪಾತ್ರವಹಿಸಿದ ಯಾರಾನ್ನಾದರೂ ಜ್ಞಾಪಿಸಿಕೊಳ್ಳುವನು, ಆ ಒಬ್ಬನನ್ನು ಅವನು ಎಲ್ಲಿಂದ ಪಡೆದು ಕೊಂಡನು? ದೇವರಿಂದ! ಯಶಸ್ಸಿಗಾಗಿ ದೇವರು ತನ್ನ ನಡಿಸುವಿಕೆಯಂತೆ ಸಂದರ್ಭಗಳನ್ನು ಒದಗಿಸಿಕೊಡದಿದ್ದರೆ, ಜನರು ಸುಮ್ಮನೇ ಜಯ ಹೊಂದುವದಿಲ್ಲ!

ಉದಾಹರಣೆಗಾಗಿ, ಹಿರಿಯನಾಗಲಿಕ್ಕೆ ಬೇಕಾಗುವ ಅರ್ಹತೆಗಳ ಬಗ್ಗೆ ಯೋಚಿಸಿರಿ. ಹಿರಿಯನು ಮೊದಲಾಗಿ ಕ್ರೈಸ್ತನಾಗಿರತಕ್ಕದ್ದು, ಒಬ್ಬ ಕ್ರೈಸ್ತನಾಗಲು ಅವಕಾಶ ಕೊಟ್ಟವನು. ದೇವರೆಂದು ಅವನು ಒಪ್ಪಿಕೊಳ್ಳುವದಿಲ್ಲವೋ? ರಕ್ಷಕನನ್ನು ಮತ್ತು ಸುವಾರ್ತೆಯನ್ನು ಒದಗಿಸಿದ್ದಕ್ಕಾಗಿ ಮಾತ್ರವಲ್ಲದೇ ರಕ್ಷಣೆಯ ಶುಭವಾರ್ತೆಯನ್ನು ಮೊದಲು ತಂದ ಪ್ರಸಂಗಿಗಳಿಂದಾಗಿಯೂ ಇಲ್ಲವೇ ಬೋಧಕರಿಗಾಗಿಯೂ ಅವನು ದೇವರಿಗೆ ಕೃತಜ್ಞತೆ ಸಲ್ಲಿಸಬೇಕು.

ಒಬ್ಬ ಹಿರಿಯನ ವೈಶಿಷ್ಟ್ಯತೆಗಳನ್ನು ಕೊಡುವ ವೈಯಕ್ತಿಕ ಗುಣಲಕ್ಷಗಳ ಬೆಳವಣಿಗೆಯನ್ನು ಗಮನಿಸಿರಿ: ಅವನು ದೇವರಿಂದ ಆಶೀರ್ವದಿಸಲ್ಪಟ್ಟಿರುವದರಿಂದ ಇವು ಅವನ ಜೀವತಕ್ಕೆ ಕೂಡಿಸಲ್ಪಟ್ಟಿವೆ. ಅವನು ತಾನು ಬೈಬಲನ್ನು ಓದುವದರಿಂದ ಅವುಗಳನ್ನು ಬೆಳಸಿಕೊಂಡಿದ್ದೇನೆ ಎಂದು ಯೋಚಿಸಬಹುದು, ಆದರೆ ಅವನಿಗೆ ಬೈಬಲನ್ನು ಲಭ್ಯವಾಗುವಂತೆ ಮಾಡಿ ಕೊಟ್ಟವರು ಯಾರು? ಅದನ್ನು ಓದಲಿಕ್ಕೆ ಅವನಿಗೆ ಸಾಮರ್ಥ್ಯ ಕೊಟ್ಟವರು ಯಾರು? ಪ್ರಸಂಗಿಸಲ್ಪಟ್ಟ ವಾಕ್ಯವನ್ನು ಕೇಳಲಿಕ್ಕೆ ಅವನನ್ನು ಬಿಟ್ಟವರು ಯಾರು? ಅವನಿಗೆ ಭಕ್ತಿಯುಳ್ಳ ತಂದೆ ತಾಯಿಗಳು

ಇದ್ದುದರಿಂದ ಅವನು ಭಕ್ತಿಯುಳ್ಳವನಾಗಬಹುದು; ಆದರೆ ಆ ತಂದೆ ತಾಯಿಗಳನ್ನು ಅವನಿಗೆ ಕೊಟ್ಟವರು ಯಾರು? ಅವನು ಇತರ ಕ್ರೈಸ್ತರೊಂದಿಗೆ ಸಂಬಂಧಿಸಿಕೊಂಡದ್ದರಿಂದ, ನಂಬಿಗಸ್ತ ಪ್ರಸಂಗಿಗಳಿಂದ ಬೈಬಲು ಬೋಧಿಸಲ್ಪಟ್ಟದ್ದರಿಂದ, ಮತ್ತು ಕ್ರೈಸ್ತ ನಾಯಕರಿಂದ ದಯೆಯಿಂದ ನಡಿಸಲ್ಪಟ್ಟಿದ್ದರಿಂದ ಅವನು ಆತ್ಮಿಕವಾಗಿ ಬೆಳವಣಿಗೆ ಹೊಂದಿರುವನು. ಹಾಗಿದ್ದರೆ, ಅಂಥ ಆಶೀರ್ವಾದಗಳಿಗೆ ಅರ್ಹನಾಗಿರುವದಕ್ಕೆ ಯಾವುದು ಸಂಬಂಧಿಸಿರುವುದಿಲ್ಲ, ಅವು ದೇವರಿಂದ ಒದಗಿಸಿಕೊಡಲ್ಪಟ್ಟಿರುತ್ತವೆ! ಸಭೆಯಲ್ಲಿ ನಡಿಸಲಿಕ್ಕೆ ಯೋಗ್ಯರಾದವರನ್ನು ಬೆಳಸುವದಕ್ಕೆ ದೇವರು ಅಂಥ ಸಾಧನಗಳನ್ನು ಉಪಯೋಗಿಸುವನು.

ಸರಿಯಾದ ರೀತಿಯ ಕುಟುಂಬವಿಲ್ಲದೆ ಒಬ್ಬ ಸಭಾ ಹಿರಿಯನಂತೆ ಯಾವ ಮನುಷ್ಯನೂ ಸ್ವೀಕಾರ ಯೋಗ್ಯವಾಗಿ ಸೇವೆ ಮಾಡಲಾರನು. ಸರಿಯಾದ ರೀತಿಯ ಹೆಂಡತಿಯೊಂದಿಗೆ ಮಾತ್ರವೇ ಅವನು ಅತಿಥಿ ಸತ್ಕಾರ ಮಾಡುವವನಾಗಿರುವನು, ತನ್ನ ಮನೆತನವನ್ನು ಚೆನ್ನಾಗಿ ನಡಿಸಿಕೊಳ್ಳ ಬಲ್ಲನು, ತನ್ನ ಮಕ್ಕಳನ್ನು "ಗೌರವದಿಂದ ತನ್ನ ಅಧೀನತೆಯಲ್ಲಿ" ಇಟ್ಟುಕೊಳ್ಳುವನು, ಮತ್ತು "ಸಭೆಯ ಹೊರಗಿನವರೊಂದಿಗೆ ಒಳ್ಳೆಯ ಸಂಬಂಧ ಹೊಂದಿದವನಾಗಿರುವನು" (1 ತಿಮೊಥೆ 3:2-7). ಒಳ್ಳೆಯ ಹೆಂಡತಿಯು ದೇವರಿಂದ ಒಂದು ವರವಾಗಿದ್ದಾಳೆ (ಜ್ಞಾನೋಕ್ತಿ 19:14; 18:22). ಇದಲ್ಲದೇ, ಒಬ್ಬ ಮನುಷ್ಯನಿಗೆ ಸರಿಯಾದ ರೀತಿಯ ಹೆಂಡತಿಯಿರಬಹುದು, ಆದರೆ ಮಕ್ಕಳು ಇರಲಿಕ್ಕಿಲ್ಲ, ಆದುದರಿಂದ ಅವನು ಒಬ್ಬ ಹಿರಿಯನಾಗಿ ಸೇವೆ ಮಾಡಲು ಶಕ್ತನಾಗುವದಿಲ್ಲ (ತೀತ 1:6). ಮಕ್ಕಳು ದೇವರಿಂದ ಬಂದ ವರಗಳಾಗಿವೆ (ಕೀರ್ತನೆ 127:3). ಇದಲ್ಲದೆ, ಅವನ ಮಕ್ಕಳು ನಂಬಿಗಸ್ತ ಕ್ರೈಸ್ತರಾಗಿ ಬೆಳೆದರೆ, ಅವನು ದೇವರಿಗೆ ಉಪಕಾರ ಹೇಳಬೇಕು; ಯಾಕೆಂದರೆ ಅವನು ಮತ್ತು ಅವನ ಹೆಂಡತಿಯು ಅವರನ್ನು ಸರಿಯಾದ ಮಾರ್ಗದಲ್ಲಿ ಬೆಳೆಸಲು ತಮ್ಮ ಅತ್ಯುತ್ತಮವಾದದ್ದನ್ನು ಮಾಡಬಹುದು ಹಾಗೂ ಅವರು ಇನ್ನೂ ಮಾರ್ಗ ತಪ್ಪಿ ಹೋಗಬಹುದು. ಮಕ್ಕಳು ನಂಬಿಗಸ್ತರಾಗಿರುವಾಗ (ತಂದೆ ತಾಯಿಗಳ ತಪ್ಪುಗಳು ಇದ್ದಾಗ್ಯೂ), ಇದೂ ಸಹ, ಆತನಿಂದ ಬರುತ್ತದೆ.

*ನಾಯಕತ್ವವು ಒಂದು ವರವಾಗಿದೆ ಎಂದು ಅರ್ಥಮಾಡಿಕೊಳ್ಳುವುದು ಸಭೆಯಲ್ಲಿ ಒಬ್ಬ ನಾಯಕನ ಮೇಲೆ ಹೇಗೆ ಪರಿಣಾಮ ಮಾಡುವುದು?* ಮೊದಲನೆಯದು, ಅವನು ದೀನನಾಗಿ ಉಳಿದು ಕೊಳ್ಳಲು ಅದು ಅವನಿಗೆ ಸಹಾಯಮಾಡಬೇಕು. ಅವನು ತನ್ನ ಸ್ವಂತ ಅರ್ಹತೆಯಿಂದ ನಾಯಕತ್ವವನ್ನು ಸಾಧಿಸಲಿಲ್ಲ; ಅವನಲ್ಲಿರುವ ಒಳ್ಳೆಯದು ದೇವರಿಂದ ಬಂದದ್ದಾಗಿರುತ್ತದೆ.

ಎರಡನೆಯದು, ಅದು ಅವನ ಪಾತ್ರವನ್ನು ದೃಷ್ಟಿಕೋನದಲ್ಲಿ ಇಟ್ಟು ಕೊಳ್ಳಲು ಅವನಿಗೆ ಸಹಾಯ ಮಾಡಬೇಕು. ಸಭೆಯಲ್ಲಿಯ ಇತರರೊಂದಿಗೆ ಅವನ ಸಂಬಂಧವು ಯಾವುದಾಗಿರುತ್ತದೆ? ಅವನಿಗೆ ಒಂದು ವರವಿದೆ - ನಾಯಕತ್ವದ ವರವಿದೆ. ಅವರಿಗೂ ಸಹ ಹಣ ಮಾಡುವಂಥ ಸಾಮರ್ಥ್ಯ, ಯುವಕರನ್ನು ಪ್ರೋತ್ಸಾಹಿಸುವುದು, ಆಹ್ವಾನಿಸುವುದು ಇಂತಹ ಅನೇಕ ರೀತಿಯ ವರಗಳಿರುತ್ತವೆ. ಈ ಎಲ್ಲಾ ವರಗಳು ಸಭೆಯ ಒಳತಿಗಾಗಿ ಉಪಯೋಗಿಸಲ್ಪಡತಕ್ಕದ್ದು. ಅವನ ವರವು ಹೆಚ್ಚು ಮಹತ್ವವುಳ್ಳದ್ದೋ? ಅದು ಹೆಚ್ಚು ಗಮನಿಸಲ್ಪಡುವಂಥದ್ದೂ, ಹೆಚ್ಚು ಬಹಿರಂಗವಾದದ್ದೂ, ಆಗಿರಬಹುದು ಆದರೆ ಅದು ಹೆಚ್ಚು ಮಹತ್ವದ್ದಾಗಿರುವದಿಲ್ಲ. ಅದು ಅವನನ್ನು ಇತರರಿಗಿಂತ ಹೆಚ್ಚು ಉತ್ತಮನಾದವನನ್ನಾಗಿ ಮಾಡುವದಿಲ್ಲ. ಸಭೆಯ ನಾಯಕರು ಹೇಗೋ ಇತರ ಸದಸ್ಯರಿಗಿಂತ ಹೆಚ್ಚಿನ ಮಟ್ಟದಲ್ಲಿರುವ, ತ್ರಿಕೋನದ ಶಿಖರದಲ್ಲಿರುವ ಪೌರೋಹಿತ್ಯ ಉನ್ನತಾಧಿಕಾರ ಕ್ರಮವನ್ನು ನಾವು ತೆಗೆದು ಹಾಕತಕ್ಕದ್ದು.

ಮೂರನೆಯದು, "ದೇವರು ನನಗೆ ನಾಯಕತ್ವದ ವರವನ್ನು ಕೊಟ್ಟಿದ್ದರೆ, ಆತನ ಮಹಿಮೆಗಾಗಿ ನಾನು ಅದನ್ನು ಉಪಯೋಗಿಸಬೇಕೆಂಬ ಉದ್ದೇಶ ಆತನಿಗಿರುವುದಲ್ಲವೇ, ಹಾಗೆಯೇ ಸಾಧ್ಯವಾದಷ್ಟನ್ನು ಆತನ ಸಭೆಯಲ್ಲಿ ಉಪಯೋಗಿಸಬೇಕೆಂದು ಇರುವದಿಲ್ಲವೇ?"

ಎಂದು ತನ್ನಷ್ಟಕ್ಕೆ ಪ್ರಶ್ನಿಸಲು ನಾಯಕನಿಗೆ ಅದು ಕಾರಣ ವಾಗಬೇಕು. ದೇವರು ಕ್ರೈಸ್ತರಿಗೆ ವರಗಳನ್ನು ಕೊಡುತ್ತಾನೆ, ಅದರಿಂದ ಅವರು ಅವುಗಳನ್ನು ಸಭೆಯ ಪ್ರಯೋಜನಕ್ಕಾಗಿ ಹಾಗೂ ಆತನ ಮಹಿಮೆಗಾಗಿ ಉಪಯೋಗಿಸತಕ್ಕದ್ದು.

ಇದನ್ನು ಯೋಚಿಸಿರಿ: ದೇವರು ಒಬ್ಬ ಮನುಷ್ಯನಿಗೆ ಒಬ್ಬ ಸಭಾಹಿರಿಯನಾಗಲು ವರವನ್ನು ಕೊಟ್ಟಿದ್ದರೆ, ಹಾಗಿರುವ ಅವಕಾಶವನ್ನು ತಿರಸ್ಕರಿಸುವುದು ಅವನಿಗೆ ತಪ್ಪಾಗಿರುವುದೋ?

## ಮುಕ್ತಾಯ

ನಾಯಕತ್ವವು, "ಮೊದಲೇ ನಿರ್ಧರಿಸಲ್ಪಟ್ಟ ಗುರಿಯನ್ನು ಇಲ್ಲವೇ ಉದ್ದೇಶವನ್ನು ನೆರವೇರಿಸುವದರ ಕಡೆಗೆ ವ್ಯಕ್ತಿಗಳನ್ನು ಇಲ್ಲವೇ ಒಂದು ಗುಂಪಿನವರನ್ನು ಉದ್ದೇಶ ಪೂರ್ವಕವಾಗಿ ಮತ್ತು ತಿಳುವಳಿಕೆಯ ಮಾರ್ಗದರ್ಶನವಾಗಿದೆ." ದೇವರು, ಯಾವಾಗಲೂ ಮಾಡಿದಂತೆ, ಇಂದು ಆತನು ತನ್ನ ಜನರಿಗಾಗಿ ನಾಯಕರನ್ನು ಒದಗಿಸುತ್ತಾನೆ. ಅನೇಕರು ನಾಯಕರಾಗಿರಲು ಸಭೆಯಲ್ಲಿ ಕರೆಯಲ್ಪಟ್ಟಿದ್ದಾರೆ. ನಡಿಸಬಲ್ಲವರು ಆದಿ ಸಭೆಯನ್ನು ಪೌಲನು ನಡಿಸಿದಂತೆ ನಡಿಸಬಹುದೋ, ಇಲ್ಲವೇ ತನ್ನ ಜನರಿಗಾಗಿ ನಾಯಕರಾಗಿರಲು ದೈವಿಕವಾದ ದೇವರ ಕರೆಯನ್ನು ತಿರಸ್ಕರಿಸುವರೋ?

---

ಟಿಪ್ಪಣೆಗಳು

[1]ಈ ನಿರೂಪಣೆಗಳಿಗಾಗಿ ಮತ್ತು ಇತರವುಗಳಿಗಾಗಿ ನೋಡಿರಿ J. J. Turner, *Leadership and Church Growth* (Shreveport, La.: Lambert Book House, 1976), 9-10. [2]Kenneth O. Gangel, *Leadership for Church Education* (Chicago: Moody Press, 1970), 12-13. [3]Curtis Vaughan, ed., *The New Testament From 26 Translations* (Grand Rapids, Mich.: Zondervan, 1967). Versions used in these lessons are listed on page 15.

## ಸಂಕ್ಷೇಪಗಳಿಗೆ ಒಂದು ಬೀಗದ ಕೈ

ಈ ಪುಸ್ತಕದಲ್ಲಿ ಉಲ್ಲೇಖಿಸಲ್ಪಟ್ಟ ಭಾಷಾಂತರಗಳು ಈ ಕೆಳಗಿನ ಸಂಕೇತಗಳಿಂದ ಗುರುತಿಸಬಹುದು:

Alf - ದ ನ್ಯೂ ಟೆಸ್ಟಾಮೆಂಟ್ (ಹೇನ್ರಿ ಆಲ್ ಫೋರ್ಡ್)
ASV - ದ ಅಮೇರಿಕನ್ ಸ್ಟ್ಯಾಂಡರ್ಡ್ ವರ್ಶನ್
Bas - ದ ನ್ಯೂ ಟೆಸ್ಟಾಮೆಂಟ್ ಇನ್ ಬೇಸಿಕ್ ಇಂಗ್ಲೀಷ್
Beck - ದ ನ್ಯೂ ಟೆಸ್ಟಾಮೆಂಟ್ ಇನ್ ದ ಲ್ಯಾಂಗ್ವೇಜ್ ಆಫ್ ಟುಡೇ (ವಿಲಿಯಮ್ ಆಫ್ ಬೆಕ್)
Ber - ದ ಬೆರ್ಕ್ಲಿ ವರ್ಶನ್ ಆಫ್ ದಿ ನ್ಯೂ ಟೆಸ್ಟಾಮೆಂಟ್ (ಗೆರ್ರಿಟ್ ವೆರ್ಕುಯಿಲ್)
Con - ದ ಎಪಿಸಲ್ಸ್ ಆಫ್ ಪೌಲ (ಡಬ್ಲ್ಯೂ. ಜೆ. ಕೊನಿಬಿಯರ್)
KJV - ದ ಕಿಂಗ್ ಜೇಮ್ಸ್ ವರ್ಶನ್
Knox - ದ ನ್ಯೂ ಟೆಸ್ಟಾಮೆಂಟ್ ಇನ್ ದ ಟ್ರಾನ್ಸ್‌ಲೇಶನ್ ಆಫ್ ಮೊನ್‌ಸಿನೊರ ರೊನಾಲ್ಡ್ ನೊಕ್ಸ್
Mof - ದ ನ್ಯೂ ಟೆಸ್ಟಾಮೆಂಟ್: ಎ ನ್ಯೂ ಟ್ರಾನ್ಸ್‌ಲೇಶನ್ (ಜೇಮ್ಸ್ ಮೊಫ್ಫಾಟ)
Mon - ದ ಸೆಂಟಿನರಿ ಟ್ರಾನ್ಸ್‌ಲೇಶನ್: ದ ನ್ಯೂ ಟೆಸ್ಟಾಮೆಂಟ್ ಇನ್ ಮೊಡರ್ನ್ ಇಂಗ್ಲೀಷ್ (ಹೆಲೆನ್ ಬಾರ್ಟಲೆಟ್ ಮೊಂಟಗೊ ಮೆರಿ)
NASB - ದ ನ್ಯೂ ಅಮೇರಿಕನ್ ಸ್ಟಾಂಡರ್ಡ್ ಬೈಬಲ್
NEB - ದ ನ್ಯೂ ಇಂಗ್ಲೀಷ್ ಬೈಬಲ್
NIV - ದ ನ್ಯೂ ಇಂಟರ್ ನ್ಯಾಶನಲ್ ವರ್ಶನ್
Nor - ದ ನ್ಯೂ ಟೆಸ್ಟಾಮೆಂಟ್: ಎ ನ್ಯೂ ಟ್ರಾನ್ಸಲೇಶನ್ (ಓ ಲಾಫ್ ಎಮ್ ನೊರ್ಲಿ)
NRSV - ದ ನ್ಯೂ ರಿವೈಜ್ಡ್ ಸ್ಟ್ಯಾಂಡರ್ಡ್ ವರ್ಶನ್
Phi - ದ ನ್ಯೂ ಟೆಸ್ಟಾಮೆಂಟ್ ಇನ್ ಮೊಡರ್ನ್ ಇಂಗ್ಲೀಷ್ (ಜೆ. ಬಿ. ಫಿಲಿಫ್ಸ್)
RSV - ದ ರಿವೈಜ್ಡ್ ಸ್ಟಾಂಡರ್ಡ್ ವರ್ಶನ್
Tay - ಅವೆಂಗ್ ಲೆಟರ್ಸ್: ದ ಪಾರಾಫ್ರೇಜ್ಡ್ ಎಪಿಸಲ್ಸ್: ಲಿವಿಂಗ್ ಗೊಸ್ಪಲ್ಸ್: ದ ಪಾರಾ ಫ್ರೇಜ್ಡ್ ಗೊಸ್ಪೆಲ್ಸ್: ಲಿವಿಂಗ್ ಪ್ರೊಫೆಸೀಜ್; ದ ಮೈನರ್ ಪ್ರೊಫೆಟ್ಸ್ ಪಾರಾಫ್ರೇಜ್ಡ್ ಆ್ಯಂಡ್ ಡ್ಯಾನಿಯೇಲ ಆ್ಯಂಡ್ ದ ರೆವೆಲೇಶನ್ (ಕೆನ್ನೆಲ್ ಎನ್. ಟೇಲರ್)
TCNT - ದ ಟ್ವೆಂಟಿಯತ್ ಸೆಂಚುರಿ ನ್ಯೂ ಟೆಸ್ಟಾಮೆಂಟ್
Wey -ದ ನ್ಯೂ ಟೆಸ್ಟಾಮೆಂಟ್ ಇನ್ ಮೊಡರ್ನ್ ಸ್ಪೀಚ್ (ರಿಚರ್ಡ್ ಫ್ರಾನ್ಸಿಸ್ ವೆಮೌತ್)
Wms - ದ ನ್ಯೂ ಟೆಸ್ಟಾಮೆಂಟ್: ಎ ಟ್ರಾನ್ಸ್‌ಲೇಶನ್ ಇನ್ ದ ಲ್ಯಾಂಗ್ವೇಜ್ ಆಫ್ ದಿ ಪೀಪಲ್ (ಚಾರ್ಲಸ್ ಬಿ. ವಿಲಿಯಮ್ಸ್)